ಶ್ರೀ ಕೆ. ಎಂ. ನಾಗಣ್ಣ.—ರೇಶ್ಮೆ ತಯಾರು ಮಾಡುವವರಿಗೆ ಮತ್ತು ಕೊಂಡುಕೊಳ್ಳುವವರಿಬ್ಬರಿಗೂ ನ್ಯಾಯ ಬೆಲೆ ಸಿಗುವ ಹಾಗೆ ಈ ಬ್ಯಾಂಕ್‌ನಲ್ಲಿ ರಾ ಮೆಟೀರಿಯಲ್ಸ್ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಬಿ. ನಾಗರಾಳ್.—ಬ್ಯಾಂಕ್ ಮಾಡಬೇಕಾದರೆ ಅದಕ್ಕೆ ಆರ್ಥಿಕ ವ್ಯವಸ್ಥೆ ಮೊದಲು ಮಾಡಬೇಕಾಗುತ್ತದೆ. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಶಿಫಾರಸು ಮಾಡಿದ್ದಾರೆ. ಅದು ಆದಾಗ ಮುಂದಕ್ಕೆ ಒಳ್ಳೆಯದಾಗುತ್ತದೆಂದು ನಾವು ಆಶೆ ಇಟ್ಟುಕೊಂಡಿದ್ದೇವೆ.

TAKING OVER OF T. D. B. AND OTHER ROADS

445. SRI S. KARIAPPA (Kanakapura).—

Will the Minister for Public Works and Electricity be pleased to state.—

(*a*) whether the Government have proposed to take up T.D.B. or other roads under control of Public Works Department ;

(*b*) if so, the names of roads they have proposed to take up under their control in Bangalore District (Taluk-wise information may be furnished)?

SRI H. M. CHANNABASAPPA (Minister for Public Works and Electricity).—

(*a*) and (*b*) This is under consideration of the Government.

ಶ್ರೀ ಎಸ್. ಕರಿಯಪ್ಪ.—ಈಗ ಯಾವಯಾವ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನವರು ರಸ್ತೆಗಳನ್ನು ಮಾಡಬೇಕೆಂದು ಪ್ರೊಪೋಸಲ್ಸ್‌ಗಳನ್ನು ಕಳಿಸಿದ್ದಾರೆ?

‡ ಶ್ರೀ ಎಚ್ ಎಂ ಚನ್ನಬಸಪ್ಪ.—ಕೆಲವು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರೂ ಕಳಿಸಿದ್ದಾರೆ; ತಾವು ಕೂಡ ಕಳಿಸಿ ಕೊಟ್ಟಿದ್ದೀರಿ.

ಶ್ರೀ ಎಸ್ ಕರಿಯಪ್ಪ.—ಪ್ರತಿಯೊಂದು ತಾಲೂಕು ಪರಿಯಕ್ಕೂ ಎಷ್ಟು ಉದ್ದದ ರಸ್ತೆ ಇರಬೇಕೆಂದು ತಾವು ಆಲೋಚನೆ ಇಟ್ಟು ಕೊಂಡಿದ್ದೀರಿ?

ಶ್ರೀ ಎಚ್.ಎಂ. ಚನ್ನಬಸಪ್ಪ.—ನಾನು ಈಗಾಗಲೇ ತಿಳಿಸಿರುವ ಹಾಗೆ ಸರಾಸರಿ ಒಂದು ತಾಲ್ಲೂಕ್‌ಗೆ ೫೦ ಮೈಲಿ ರಸ್ತೆ ಮಾಡಬೇಕೆಂದಿದ್ದೇವೆ. ಅದರಲ್ಲಿ ಹೊಸ ರಸ್ತೆಗಳು, ಕೆಟ್ಟು ಹೋದ ರಸ್ತೆಗಳು, ವಿಂಸ್ಸಿಂಗ್ ಲಿಂಕ್ಸ್ ಎಲ್ಲವೂ ಬರುತ್ತಹೆ. ಎಲ್ಲಿ ಸ್ವಲ್ಪ ಕಡಿಮೆ ಇದೆ ಅಲ್ಲಿ ಸ್ವಲ್ಪ ಜಾಸ್ತಿಯಾಗಿ ಮಾಡಬೇಕು, ಮತ್ತು ಎಲ್ಲಿ ಸ್ವಲ್ಪ ಜಾಸ್ತಿ ಇದೆ ಅಲ್ಲಿ ಸ್ವಲ್ಪ ಕಡಿಮೆಯಾಗಬಹುದು, ಹೀಗೆ ಒಂದು ತಾರತಮ್ಯ ಇದ್ದುದನ್ನು ನೋಡಿ ಕೊಂಡು ಮಾಡಬೇಕೆಂದು ವ್ಯವಸ್ಥೆ ಮಾಡಿದ್ದೇವ.

ಶ್ರೀ ಗೋಪಿನಾಥ ಆರ್. ಸಾಂದ್ರ.—ನಿಮ್ಮ ಕಾರ್ಯಕ್ರಮ ಯಾವಾಗ ಕಾರ್ಯರೂಪದಲ್ಲಿ ಬರುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವಾರದೊಳಗೆ ಇದನ್ನು ಕಾರ್ಯರೂಪದಲ್ಲಿ ತರುತ್ತೇವೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಶಿವಮೊಗ್ಗ ಜಿಲ್ಲೆಯಲ್ಲಿ ಲಿಂಗನಮಕ್ಕಿ ಹೈ ಪವರ್ ಕಮಿಟಿ ಮಾಡಿರುವ ರಸ್ತೆಗಳನ್ನು ಪಿಡಬ್ಲ್ಯೂಡಿಯವರೂ ತೆಗೆದುಕೊಂಡಿಲ್ಲ, ಮತ್ತೆ ಹೈ ಪವರ್ ಕಮಿಟಿಯವರೂ ತೆಗೆದುಕೊಂಡಿಲ್ಲ. ಆದ್ದರಿಂದ ಅದನ್ನು ಪಿಡಬ್ಲ್ಯೂಡಿಯವರು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್ ಎಂ ಚನ್ನಬಸಪ್ಪ.—ಇಂತಹ ರಸ್ತೆಗಳು ಅನೇಕ ಇವೆ. ಅವುಗಳ ಯೋಗ್ಯಾಯೋಗ್ಯತೆಯನ್ನು ಪರಿಶೀಲನೆ ಮಾಡಿ ಯಾವ್ಯಾವ ತಾಲೂಕುಗಳಲ್ಲಿ ಎಷ್ಟೆಷ್ಟು ತೆಗೆದುಕೊಳ್ಳಬೇಕೆಂದು ನಿಯಮಗಳನ್ನು ಮಾಡಿ, ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಾಪನಾಯ್ಕ.—ಈಗ ಪ್ರತಿಯೊಂದು ತಾಲೂಕಿನಲ್ಲಿಯೂ ೫೦ ಮೈಲು ಸರಾಸರಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. ಆದರೆ ಕೆಲವು ತಾಲೂಕುಗಳಲ್ಲಿ ೧೦–೧೫ ಮೈಲು ಮಾಡಿ ಕೆಲವು ಕಡೆ ೬೦–೭೦ ಮೈಲು ಮಾಡುವುದು ನ್ಯಾಯವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಿ ರಸ್ತೆಗಳು ಸಂಪೂರ್ಣವಾಗಿವೆ ಅಂಥ ಕಡೆ ಸ್ವಲ್ಪ ಕಮ್ಮಿಯಾಗುತ್ತದೆ. ಮತ್ತು ಎಲ್ಲಿ ಏನೂ ಆಗಿಲ್ಲ ಅಂಥ ಕಡೆ ಸ್ವಲ್ಪ ಹೆಚ್ಚು ಮಾಡಬೇಕಾಗುತ್ತದೆ.

ಶ್ರೀ ಎಂ ಬಿ. ರಾಮಸ್ವಾಮಿ.—ಈಗ ಕೆಲವು ತಾಲೂಕುಗಳಲ್ಲಿ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದನ್ನು ಎಷ್ಟು ದಿವಸಗಳಲ್ಲಿ ಕಾರ್ಯಗತ ಮಾಡುತ್ತೀರಿ?

ಶ್ರೀ ಎಚ್ ಎಂ ಚನ್ನಬಸಪ್ಪ.—ನಾನು ಆಗಲೇ ಹೇಳಿದ್ದೇನೆ. ೧೭೦ ತಾಲೂಕುಗಳಲ್ಲಿ ೧೧೦ ತಾಲ್ಲೂಕುಗಳ ವರದಿಗಳು ಸಿದ್ಧವಾಗಿವೆ. ನಾಳೆ ನಾನು ಜಿಲ್ಲಾವಾರು ಸದಸ್ಯರುಗಳನ್ನು ಕರೆದು ಸಮಾಲೋಚನೆ ಮಾಡಬೇಕೆಂದು ಇದ್ದೆ. ಆದರೆ ನಾಳೆ ನಾನು ಹೈದರಾಬಾದಿಗೆ ಹೋಗ ಬೇಕಾಗಿರುವುದರಿಂದ, ಅದರ ನಂತರ ಅಂದರೆ ಮೂರು ದಿವಸ ಬಿಟ್ಟು ಮುಂದಿನ ದಿವಸ ಸದಸ್ಯರನ್ನು ಕರೆದು ವಿಚಾರ ಮಾಡಿ ಒಂದೊಂದು ಜಿಲ್ಲೆಯನ್ನೂ ಪೂರೈಸುತ್ತೇನೆ.

ಶ್ರೀ ಎ. ವಿ. ವೆಂಕಿಸ್ವಾಮಿ.—ರಸ್ತೆಗಳು ಯೋಗ್ಯವಾಗಿ ಒಳ್ಳೆಯದಾಗಿವೆಯೆಂದು ತೆಗೆದುಕೊಳ್ಳುತ್ತೀರೋ ಅಥವಾ ಕೆಟ್ಟವೆಯೆಂದು ತೆಗೆದುಕೊಳ್ಳುತ್ತೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಳ್ಳೆಯ ರಸ್ತೆಗಳನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ.

SRI D. B. KALMANKAR.—May I know whether the Government proposes to take up all the T.D.B roads once for all or in phases ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿರುವುದು ತಾಲ್ಲೂಕು ಬೋರ್ಡ್ ರಸ್ತೆಗಳು ಅಥವಾ ತಾಲ್ಲೂಕು ಬೋರ್ಡಿಗೆ ಸೇರದೇ ಇರುವ ರಸ್ತೆಗಳು ಎನ್ನುವ ಪ್ರಶ್ನೆಯಲ್ಲ. ಒಟ್ಟಿನಲ್ಲಿ ರಸ್ತೆಗಳ ಪ್ರಾಮುಖ್ಯತೆ ಹೆಚ್ಚಾಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—೫೦ ಮೈಲಿಗಳ ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆಗಳನ್ನಾಗಿಮಾಡಿ ತಾಲ್ಲೂಕಿಗೆ ಕೊಡುವುದು, ಹೊಸ ರಸ್ತೆಗಳನ್ನು ತಾಲ್ಲೂಕಿಗೇ ಕೊಡತಕ್ಕ ವಿಷಯ ಬೇರೆ ಬೇರೆಯಾಗಿವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೆರಡೂ ಬೇರೆಬೇರೆ ಸಮಸ್ಯೆಗಳಾಗಿವೆ. ಹಳ್ಳಿಗಳಲ್ಲಿ ರಸ್ತೆಗಳನ್ನು ಹೊಸದಾಗಿ ಮಾಡುವುದು ಮತ್ತು ಕೆಟ್ಟು ಹೋಗಿರತಕ್ಕ ರಸ್ತೆಗಳನ್ನು ದುರಸ್ತು ಮಾಡುವುದು. ಈಗ ಹಳ್ಳಿಗಳ ರಸ್ತೆಗಳನ್ನು ತಾಲ್ಲೂಕಂಬೋರ್ಡ್ ರಸ್ತೆಗಳನ್ನಾಗಿ ಮಾಡಿ ಪ್ರಾಮುಖ್ಯವಾದಂಥ ರಸ್ತೆಗಳನ್ನು ಸ್ಟೇಟ್‌ಫಂಡ್ ರಸ್ತೆಗಳಾಗಿ ಅಪ್‌ಗ್ರೇಡ್ ಮಾಡುವುದು ಇರತಕ್ಕ ವಿಷಯ.

SALE OF LAND TO COFFEE GROWERS IN THE STATE

451. SRI G. PUTTASWAMY (Mudigere).—

Will the Minister for Revenue be pleased to state :—

(*a*) whether it has come to the notice of the Government that the Coffee Growers are experiencing difficulties in getting loans, etc., from the Indian Coffee Board, Banks and other Organisations, as the land for Coffee cultivaion is sanctioned on lease basis with lease chits ;

(*b*) if so, the steps taken to sanction the land as an out-right grant by recovering the land value with permanent Saguvali Chits ;

(*c*) whether there is any proposal before Government to amend the Land Grant Rules in order to prevent the discretionary powers of the authorities granting the land in regard to levy of (upset price) land value, specifying one standard value ?